





## ರಾಜಶೇಖರ ಕುಕ್ಕುಂದಾ

ಕಲೆ: ಸಂತೋಷ್ ಸಸಿಹಿತ್ಲು


# ಸೊಳ್ಳೆ

ಸೊಳ್ಳೆ ಸೊಳ್ಳೆ
ಕಳ್ಳೆ ಮಿಳ್ಳೆ
ಕೈಗೇ ಸಿಗಲೊಲ್ಲೆ

ಕುಂತಲ್ಲೆಲ್ಲ
ನಿಂತಲ್ಲೆಲ್ಲ
ಬೆನ್ನೇ ಬಿಡಲೊಲ್ಲೆ

ಸುತ್ತಿ ಸುತ್ತಿ
ಮೈಗೆ ಮೆತ್ತಿ
ಕಚ್ಚಿ ಕಚ್ಚಿ ಗಾಯ

ಅಯ್ಯೋ ನಾನು
ಓದೋದೆಂತು?
ಹೇಳೋ ಮಹರಾಯ

ಗಾಳಿಯಲ್ಲಿ
ಗುಂಯ್ ಎಂದು
ನಿನ್ನ ತೇಲಾಟ

ಗದ್ದ ಹಿಡಿದು
ಕೇಳೋರ‍್ಯಾರು
ನನ್ನ ಗೋಳಾಟ!



# ನಾನೇ ಲೀಡರ್!

ಸ್ಟೇರಿಂಗ್ ಹಿಡ್ದು
ಲಾರಿ ಹೊಡ್ದು
ನಾನೇ...
ಡ್ರೈವರ್ ಡ್ರೈವರ್

ಅಳತೆ ತೆಗ್ದು
ಬಟ್ಟೆ ಹೊಲ್ದು
ನಾನೇ...
ಟೈಲರ್ ಟೈಲರ್

ಸಲೈನ್ ಹಚ್ಚಿ
ಸೂಜಿ ಚುಚ್ಚಿ
ನಾನೇ...
ಡಾಕ್ಟರ್ ಡಾಕ್ಟರ್

ಪಾಠಾ ಹೇಳಿ
ಪ್ರಶ್ನೆ ಕೇಳಿ
ನಾನೇ...
ಟೀಚರ್ ಟೀಚರ್

ಖಾದಿ ತೊಟ್ಟು
ಗಡ್ಡ ಬಿಟ್ಟು
ನಾನೇ...
ಲೀಡರ್ ಲೀಡರ್!